ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.

| | |
|---|---|
| **ಸಿ.ಸಿ. ನಂ :-** | **1114/2019** |
| ಸಿ.ಡಬ್ಲ್ಯೂ: **-04** | ಪಿ.ಡಬ್ಲ್ಯೂ**-06** |
| **ದಿನಾಂಕ :-** | **06.03.2026** |

| | |
|---|---|
| ಹೆಸರು | ಎ.ನಾಗರಾಜ ರೆಡ್ಡಿ |
| ತಂದೆ/ತಾಯಿ/ ಗಂಡನ ಹೆಸರು | ಲೇಟ್. ಅಪ್ಪಯ್ಯ ರೆಡ್ಡಿ |
| ವಯಸ್ಸು | 59 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಸುರಗಜಕ್ಕನಹಳ್ಳಿ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಪ್ರಾಜ್ಞ ಸ. ಸ. ಅ ರವರಿಂದ

ಚಾಸಾ-1, 2, 3, 5 ಮತ್ತು 6 ರವರು ನನಗೆ ಗೊತ್ತಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ. ಮೃತ ಬೈಜು ಜಾಯ್ ರವರು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಮಾಹಿತಿ ಇಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಸಾಕ್ಷಿಗೆ ನಿಪಿ-6 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕಃ 11.01.2019 ರಂದು ಪೊಲೀಸರ ಕೋರಿಕೆಯ ಮೇರೆಗೆ ಮಾಡಿದ್ದೇನೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

(ಮಾನ್ಯ ಸ. ಸ. ಅ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಹಾಗೂ ಪಾಟೀ ಸವಾಲಿಗೆ ಅವಕಾಶ ಕೋರಿದ್ದು, ಅವರ ಮನವಿ ಅಂಗೀಕರಿಸಿ ಪಾಟೀ ಸವಾಲಿಗೆ ಅವಕಾಶ ಮಾಡಿಕೊಡಲಾಗಿದೆ.)

ಪಾಟೀ ಸವಾಲುಃ ಪ್ರಾಜ್ಞ ಸ. ಸ. ಅ ರವರಿಂದ

ದಿನಾಂಕಃ 11.01.2019 ರಂದು ಬೆಳಿಗ್ಗೆ 10-30 ಗಂಟೆ ಸಮಯದಲ್ಲಿ ಕಾಡಅಗ್ರಹಾರ-ಕೊಮ್ಮಸಂದ್ರ ರಸ್ತೆಯಲ್ಲಿ ಮೃತ ಬೈಜು ಜಾಯ್ ರವರು ಕೆಎ-01 ಹೆಚ್‌ಯೂ-1811 ಮೋಟಾರ್ ಸೈಕಲ್ ನಲ್ಲಿ

ಹೋಗುತ್ತಿದ್ದರು.  ಅವರ ಹಿಂದೆ ನಾನು ಮೋಟಾರ್ ಸೈಕಲ್ ನಲ್ಲಿ ನಾನು ಹೋಗುತ್ತಿದ್ದೇ ಎಂದರೆ ಸರಿಯಲ್ಲ.  ಆಗ ಎದುರುಗಡೆಯಿಂದ ಕ್ಯಾಂಟರ್ ಸಂಖ್ಯೆ ಕೆಎ-08-5731 ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬೈಜು ಜಾಯ್ ರವರ ಮೋಟಾರ್ ಸೈಕಲ್‌ಗೆ ಡಿಕ್ಕಿಪಡಿಸಿದರು ಎಂದರೆ ಸರಿ.  ಅದರ ಪರಿಣಾಮ ಅವರು ಕೆಳಗೆ ಬಿದ್ದು ತೀವ್ರ ಸ್ವರೂಪದ ಗಾಯಗೊಂಡು, ನಂತರ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ.  ಸದರಿ ಕ್ಯಾಂಟರ್ ಚಾಲಕ ವಾಹನ ನಿಲ್ಲಿಸದೆ ಹೊರಟು ಹೋಗಿರುತ್ತಾನೆ ಎಂದರೆ ಸರಿ.

ದಿನಾಂಕಃ 17.01.2019 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಸಿ, ಅಪಘಾತದಲ್ಲಿ ಭಾಗಿಯಾಗಿದ್ದ ಮೇಲೆ ಹೇಳಿದ ಎರಡು ವಾಹನಗಳನ್ನು ನಿಪಿ-6 ರಂತೆ ಮಹಜರ್ ಮಾಡಿ ಪೊಲೀಸರು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ಆಗ ನಾನು ನಿಪಿ-6 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ.  ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ.ಬಿ.ಇ.ಎನ್. ವಕೀಲರಿಂದ

ನಾನು ಘಟನೆಯ ದಿನ ಕೆಲಸಕ್ಕೆ ಹೋಗುತ್ತಿದ್ದ ಬಗ್ಗೆ ನನ್ನ ಬಳಿ ಗುರುತಿನ ಚೀಟಿ ಇದೆ.  ನಾನು ಬೆಳಿಗ್ಗೆ 09-00 ಗಂಟೆಗೆ ಹೋದರೆ ಸಂಜೆ 07-00 ಗಂಟೆಗೆ ಬರುತ್ತೇನೆ.  ನಾನು ಕೆಲಸಕ್ಕೆ ಹೋಗಲು ಮನೆಯಲ್ಲಿ ಬೆಳಿಗ್ಗೆ 08-30 ಗಂಟೆಗೆ ಹೋಗುತ್ತೇನೆ.  ನಮ್ಮ ಮನೆಯಿಂದ ಕೆಲಸದ ಸ್ಥಳಕ್ಕೆ ಹೋಗಲು 45 ನಿಮಿಷ ಬೇಕಾಗುತ್ತದೆ.  ಘಟನೆಯ ದಿನ ನಾನು ಬೆಳಿಗ್ಗೆ 10-30 ಗಂಟೆಗೆ  ಕೆಲಸದಲ್ಲಿ ಇದ್ದೆ ಎಂದರೆ ಸರಿ.  ನಾನು ಹೋಗುವ ಸಮಯದಲ್ಲಿ ರಸ್ತೆಯಲ್ಲಿ ಅನೇಕ ವಾಹನಗಳು ಹೋಗುತ್ತವೆ ಎಂದರೆ ಸರಿ.  ಆ ಕಾರಣ ಯಾವ ಯಾವ ವಾಹನಗಳು ಹೋಗುತ್ತವೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ.

ಸರ್ಜಾಪುರ ಪೊಲೀಸ್ ಠಾಣೆಗೆ ಆಗಾಗ ಹೋಗುತ್ತೇನೆ ಎಂದರೆ ಸರಿ.  ಆ ಸಮಯದಲ್ಲಿ ಪೊಲೀಸರು ಕೇಳಿದ ದಾಖಲೆಗಳಿಗೆ ಸಹಿ ಮಾಡುತ್ತೇನೆ ಎಂದರೆ ಸರಿ.  ಆ ಸಮಯದಲ್ಲಿ ನಾನು ಯಾವುದೇ ದಾಖಲೆಯನ್ನು ಓದುವುದಿಲ್ಲ ಎಂದರೆ ಸರಿ.  ಯಾವ ದಿನ ಯಾವ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ.  ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದರೆ ಸರಿ.  ಆರೋಪಿ ಹೇಗಿದ್ದಾನೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು,
ಆನೇಕಲ್.